ಎಂ ವಿ ಸಿ.ನಂ.299/2024 ಪಿಡಬ್ಲೂಃ 1

ದಿನಾಂಕಃ 18-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿಃ ಶ್ರೀ ಎಮ್ ಡಿ ಆರ್ ವಕೀಲರಿಂದಃ**

3. ವಾಹನ ಪಂಚನಾಮೆಯ ಪೋಟೋದ ದೃಢಿಕೃತ ನಕಲನ್ನು ನಿಪಿ-7 ಎಂದು, ಅಪಘಾತ ಪಡಿಸಿದ ವಾಹನದ ಜಪ್ತು ಪಂಚನಾಮೆಯ ದೃಢಿಕೃತ ನಕಲನ್ನು ನಿಪಿ-8 ಎಂದು, ಐ ಎಮ್ ವಿ ವರದಿ ದೃಢಿಕೃತ ನಕಲನ್ನು ನಿಪಿ-9 ಎಂದು, ಅಪಘಾತ ಸ್ಥಳ ಪಂಚನಾಮೆಯ ದೃಢಿಕೃತ ನಕಲನ್ನು ನಿಪಿ-10 ಎಂದು, ಸ್ಥಳ ಪಂಚನಾಮೆಯ ಮೂರು ಪೋಟೋಗಳ ದೃಢಿಕೃತ ನಕಲುಗಳನ್ನು ನಿಪಿ -11 ಎಂದು, ದೋಷಾರೋಪಣೆಯ ಪತ್ರದ ದೃಢಿಕೃತ ನಕಲನ್ನು ನಿಪಿ-12 ಎಂದು, ಸಿಸಿ ನಂ. 1121/2024 ಆದೇಶ ಪುಟಗಳ ದೃಢಿಕೃತ ನಕಲನ್ನು ನಿಪಿ-13 ಎಂದು ಗುರುತಿಸಲಾಯಿತು.

1 ನೇ ಎದುರುದಾರ ಪರ ವಕೀಲರನ್ನು ಕೂಗಿಸಿ ಕರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲವೆಂದು ತೆಗೆ ದುಕೊಳ್ಳಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಎಸ್ ಎಮ್ ಬಿ ವಕೀಲರಿಂದ :**

4. ಅಪಘಾತ ಸಮಯದಲ್ಲಿ ನಮ್ಮ ಟಿಪ್ಪಟ ವಾಹನಕ್ಕೆ ಪ್ರದೀಪ ನಾಯ್ಕ ಎಂಬುವವರು ಚಾಲಕರಾಗಿದ್ದರು . ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ . ನಾನು ಹಾಗೂ ಡ್ರೈವರ್ ಬಂದು ಪೋಲಿಸರಲ್ಲಿ ಕಂಪ್ಲೆಂಟ್ ನ್ನು ಕೊಟ್ಟಿರುತ್ತೇವೆ . ಅಪಘಾತ ಸಮಯದಲ್ಲಿ ನಾನೇ ಟಿಪ್ಪರ ವಾಹನದ ಮಾಲೀಕನಾಗಿದ್ದೆ ಎಂದು ತೋರಿಸಲು ವಾಹನದ ಆರ್ ಸಿ ಬುಕ್ ಹಾಜರು ಪಡಿಸಲು ತೊಂದರೆ ಇಲ್ಲ . ಅಪಘಾತ ಸಮಯದಲ್ಲಿ ಟಿಪ್ಪರ ವಾಹನಕ್ಕೆ ನ್ಯಾಷನಲ್ ಇನ್ಸುರೆನ್ಸ ಕಂಪನಿಯಿಂದ ಪಾಲಿಸಿ ಹೊಂದಲಾಗಿತ್ತು .

ಡ್ಯಾಮೇಜ್ ಪರಿಹಾರ ಕೇಳಿ ನ್ಯಾಷನಲ್ ಇನ್ಸುರೆನ್ಸ ಕಂಪನಿಗೆ ಅರ್ಜಿಯನ್ನು ಕೊಟ್ಟಿದ್ದೆ ಆದರೆ ಅವರು ಏನು ಹೇಳಲಿಲ್ಲ. ಸದರಿ ಅರ್ಜಿ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ನ್ಯಾಷನಲ್ ಇನ್ಸುರೆನ್ಸ ಕಂಪನಿಯಲ್ಲಿ ನಮ್ಮ ವಾಹನವನ್ನು ಎರಡುವರೆ ಮೂರು ಲಕ್ಷ ಮಟ್ಟಕ್ಕೆ ಇನ್ಸುರೆನ್ಸ ಮಾಡಿದ್ದರು. ನಮ್ಮ ವಾಹನ 2014 ರ ಮೊಡೆಲ್ ಇತ್ತು . ನಾನು ಸದರಿ ವಾಹನದ ಎರಡನೇ ಮಾಲೀಕ . ಮೊದಲನೇ ಮಾಲೀಕರ ಹೆಸರು ಫರ್ನಾಂಡಿಸ್ . ಮೊದಲನೇ ಮಾಲೀಕನಿಂದ ನಾನು ವಾಹನವನ್ನು ಖರೀದಿಸಿ 8 ತಿಂಗಳು ಆಗಿತ್ತು . ನಾವು ಗಾಡಿಯನ್ನು ಖರೀದಿ ಮಾಡುವಾಗ ಗಾಡಿಗೆ ಇನ್ಸುರೆನ್ಸ ಇತ್ತು . ನಾವು ಗಾಡಿ ಖರೀದಿಸಿದಾಗ ಒಂದು ಲಕ್ಷದ 64 ಸಾವಿರ ಕಿಲೋ ಮೀಟರ್ ರನ್ ಆಗಿತ್ತು . ಅಪಘಾತವಾದಾಗ 2-3 ಸಾವಿರ ಕಿ. ಮೀ . ರನ್ ಆಗಿತ್ತು . ಅಪಘಾತ ಸಮಯದಲ್ಲಿ ನಮ್ಮ ವಾಹನಕ್ಕೆ ಪರ್ಮಿಟ್ ಹಾಗೂ ಫಿಟನೆಸ್ ಸರ್ಟಿಫಿಕೇಟ್ ಹಾಜರು ಪಡಿಸಲು ತೊಂದರೆ ಇಲ್ಲ . ಅಪಘಾತ ಸಮಯದಲ್ಲಿ ನಮ್ಮ ವಾಹನದ ಚಾಲಕನಿಗೆ ಸೂಕ್ತ ಚಾಲನಾ ಪರವಾನಿಗೆ ಇತ್ತು ಎಂದು ತೋರಿಸಲು ದಾಖಲಾತಿ ಹಾಜರ ಪಡಿಸಲು ತೊಂದರೆ ಇಲ್ಲ . ಅಪಘಾತದ ನಂತರ ಮೋಟಾರು ವಾಹನ ಪರೀಕ್ಷಕರು ವಾಹನವನ್ನು ಪರೀಕ್ಷಿಸಿ ವರದಿಯನ್ನು ಕೊಟ್ಟಿರುತ್ತಾರೆ. ಸದರಿ ವರದಿಯಲ್ಲಿ ವಾಹನಕ್ಕೆ ಆಗಿರುವ ಡ್ಯಾಮೇಜ್ ಬಗ್ಗೆ ನಮೂದು ಮಾಡಿದ್ದಾರೆ. ಸರ್ವೇಯರ್ ನ್ನು ನಾನೇ ಫೋನ್ ಮಾಡಿ ಕರೆಸಿದ್ದೆ . ಗ್ಯಾರೇಜ್ ನಲ್ಲಿ ಬಂದು ವಾಹನವನ್ನು ಇನ್ಸಪೆಕ್ಷನ್ ಮಾಡಿದರು . ಅಪಘಾತವಾದ ಒಂದು ವಾರದ ನಂತರ ಗ್ಯಾರೇಜ್ ಗೆ ಬಂದು ವಾಹನದ ಇನ್ಸಪೆಕ್ಷನ್ ಮಾಡಿದರು . ವಾಹನವನ್ನು ಪೋಲಿಸ್ ಠಾಣೆಯಿಂದ ಬಿಡಿಸಿಕೊಂಡು ಹೋದ ನಂತರ ವಾಹನ ಗ್ಯಾರೇಜ್ ನವರ ತಾಬಾದಲ್ಲಿ ಇತ್ತು . ವಾಹನ ಡ್ಯಾಮೇಜ್ ಆಗಿದೆ ಎಂದು ನಾನು ನ್ಯಾಷನಲ್ ಇನ್ಸುರೆನ್ಸ ಕಂಪನಿಯಿಂದ ಪರಿಹಾರ ಪಡೆದಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆದಿಲ್ಲ ಎಂದು ಹೇಳಲು ನನ್ನ ಬಾಯಿಮಾತಿನ ಹೇಳಿಕೆ ಬಿಟ್ಟು ಬೇರೆ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ . ವಾಹನ ಚಂದಾವರದ ದುರ್ಗಾ ಗ್ಯಾರೇಜ್ ನಲ್ಲಿ ಇತ್ತು . ಸದರಿ ಗ್ಯಾರೇಜ್ ನ ಮಾಲೀಕರ ಹೆಸರು ಪುತ್ತು . ಗ್ಯಾರೇಜ್ ಅವರ ಹೆಸರಿನಲ್ಲಿತ್ತು ಹಾಗೂ ಸದರಿ ಗ್ಯಾರೇಜ್ ನಲ್ಲಿ ನಮ್ಮ ವಾಹನ ಇತ್ತು ಎಂದು ತೋರಿಸಲು ದಾಖಲಾತಿ

ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ . ಆ ದಿನ ನಮ್ಮ ವಾಹನ ಖಾಲಿ ಇತ್ತು . ಲೋಡ್ ಮಾಡಲು ಕುಮಟಾಕ್ಕೆ ಹೋಗುತ್ತಿತ್ತು . ಪರಿಹಾರದ ಅರ್ಜಿ ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ . ನಮ್ಮ ಇನ್ಸುರೆನ್ಸ ಕಂಪನಿಯವರು ಪರಿಹಾರ ಕೊಡದೆ ಇದ್ದಾಗ ಅವರ ವಿರುದ್ಧ ನಾವು ಯಾವುದೇ ಕ್ರಮ ಕೈಗೊಂಡಿಲ್ಲ.

5. ಕಾರು ನಮ್ಮ ವಾಹನದ ಹಿಂದಿನಿಂದ ಬರುತ್ತಿತ್ತು. ಅದು ನಮ್ಮ ವಾಹನವನ್ನು ಓವರಟೇಕ್ ಮಾಡಿ ಮುಂದಿನ ಬಲ ಟೈಯರ್ ಗೆ ಗುದ್ದಿರುತ್ತದೆ . ಸದರಿ ಅಪಘಾತದಲ್ಲಿ ಕಾರ ಚಾಲಕನಿಗೆ ತೀವ್ರ ಸ್ವರೂಪದ ಗಾಯವಾಗಿತ್ತು ಹಾಗೂ ಕಾರಿಗೆ ಡ್ಯಾಮೇಜ್ ಆಗಿತ್ತು ಎಂದರೆ ಸರಿ . ಅಪಘಾತ ಕಾರ ಚಾಲಕನ ತಪ್ಪಿನಿಂದ ಆಗಿಲ್ಲ ಟಿಪ್ಪಟ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ . ಕಾರ ಚಾಲಕನು ಸಾವಕಾಶವಾಗಿ ನಿಧಾನವಾಗಿ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡಿಲ್ಲ ಎಂದರೆ ಸರಿ . ಕಾರ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಇರಲಿಲ್ಲ ಹಾಗೂ ಕಾರಿಗೆ ಫಿಟ್ ನೆಸ್ ಸರ್ಟಿಫಿಕೇಟ್ ಇರಲಿಲ್ಲ ಎಂದರೆ ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ. ಕಾರ ಚಾಲಕ ಥರ್ಡ ಪಾರ್ಟಿ ಪ್ರಾಪರ್ಟಿ ಡ್ಯಾಮೇಜ್ ಗೆ ಸಂಬಂಧಪಟ್ಟಂತೆ ವಿಮೆಯನ್ನು ಕಟ್ಟಿರಲಿಲ್ಲ ಕಾರಣ 2 ನೇ ಎದುರುದಾರ ವಿಮಾ ಕಂಪನಿ ಪರಿಹಾರ ಕೊಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ . ಅಪಘಾತ ಸಮಯದಲ್ಲಿ ನಮ್ಮ ವಾಹನ ಹಳೇಯದಾಗಿತ್ತು, ಕಾರಣ ನಮ್ಮ ವಾಹನ ಅಷ್ಟೊಂದು ಬೆಲೆ ಬಾಳುವದಾಗಿರಲಿಲ್ಲ ಎಂದರೆ ಸರಿಯಲ್ಲ . ಹೆಚ್ಚಿನ ಪರಿಹಾರ ಸಿಗಲೆಂದು ಸರ್ವೆಯರ್ ಮೇಲೆ ಪ್ರಭಾವ ಬೀರಿ ಸುಳ್ಳು ವರದಿಯನ್ನು ತಂದಿದ್ದೇನೆ ಎಂದರೆ ಸರಿಯಲ್ಲ . ಹೆಚ್ಚಿನ ಪರಿಹಾರ ಪಡೆಯಲು ನಿಪಿ-3 ರಿಂದ ನಿಪಿ-6 ಸೃಷ್ಟಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ. ನಮ್ಮ ಗಾಡಿಗೆ ಆಗಿರುವ ಡ್ಯಾಮೆಜ್ ಗೂ ಅಪಘಾತಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ . ಅಪಘಾತ ಸಮಯದಲ್ಲಿ ನಾನು ವಾಹನದ ಮಾಲೀಕನಾಗಿರಲಿಲ್ಲ ಎಂದರೆ ಸರಿಯಲ್ಲ . ನಮ್ಮ ವಿಮಾ ಕಂಪನಿಯಿಂದ ಪೂರ್ತಿ ಪರಿಹಾರವನ್ನು ಪಡೆದ ನಂತರ ಈಗ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

ವಾಹನ ಅಪಘಾತದಿಂದ ನನಗೆ ನಷ್ಟ ಹಾಗೂ ಯಾವುದೇ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ . ವಾಹನ ರಿಪೇರಿಗಾಗಿ ಗ್ಯಾರೇಜ್ ನಲ್ಲಿ ಬಹಳಷ್ಟು ದಿನ ನಿಂತಿತ್ತು , ಅದರಿಂದ ನನಗೆ ನಷ್ಟ ಉಂಟಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನವನ್ನು ಟ್ರಾನ್ಸಪೋರ್ಟಗೆ ಉಪಯೋಗಿಸುತ್ತಿದ್ದೆವು, ಅದರಿಂದ ದಿನಕ್ಕೆ 3 ಸಾವಿರ ರೂಪಾಯಿ ಆದಾಯವಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

{3 ನೇ ಎದುರುದಾರ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.}

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.